ನಿರ್ದೇಶನ ನೀಡುತ್ತಿತ್ತು. ಇಡೀ ಪ್ರಕ್ರಿಯೆಯಲ್ಲಿ ಎಲ್ಲಿಯೂ ವೈದ್ಯರ, ಮನುಷ್ಯರ ಹಸ್ತಕ್ಷೇಪವೇ ಇರಲಿಲ್ಲ!

ಕಳೆದ ಶತಮಾನದಲ್ಲಿ ಕಂಡ ಕಂಡ ದೇಶಗಳ ಮೇಲೆ ಯುದ್ಧ ಮಾಡುತ್ತಿದ್ದ ಅಮೆರಿಕಕ್ಕೆ ತನ್ನ ಸೈನಿಕರ ಮಾನಸಿಕ ಆರೋಗ್ಯದ್ದೇ ದೊಡ್ಡ ಚಿಂತೆಯಾಗಿತ್ತು. ಹಲವರು ಖಿನ್ನತೆಯಿಂದ ಬಳಲುತ್ತಿದ್ದರು. ಅದರಿಂದ ಅವರನ್ನು ಹೊರತರಲು ಸೈನಿಕರ ಮಿದುಳಿನೊಳಗೆ ಚಿಕ್ಕ ಎಲೆಕ್ಟ್ರೋಡ್‌ಗಳನ್ನು ಊರಿ, ಅವನ್ನು ಕೇಬಲ್‌ನ ಮೂಲಕ ಎದೆಯೊಳಗೆ ಹುದುಗಿಸಿದ ಅತಿಸಣ್ಣ ಕಂಪ್ಯೂಟರ್‌ಗೆ ಕನೆಕ್ಟ್ ಮಾಡಲಾಯಿತು. ಕಂಪ್ಯೂಟರ್‌ನ ಅಲ್ಗೊರಿದಂನ ಸಂದೇಶ ಪಡೆಯುತ್ತಲೇ ಸಣ್ಣ ಪ್ರಮಾಣದ ವಿದ್ಯುತ್ ಹರಿಸುತ್ತಿದ್ದ ಎಲೆಕ್ಟ್ರೋಡ್‌ಗಳು ಖಿನ್ನತೆಯ ಭಾವ ಹುಟ್ಟಿಸುತ್ತಿದ್ದ ಮೆದುಳಿನ ಭಾಗವನ್ನು ತಾತ್ಕಾಲಿಕವಾಗಿ ನಿಷ್ಕ್ರಿಯಗೊಳಿಸುತ್ತಿದ್ದವು. ಇದರಿಂದ ಚಿಕಿತ್ಸೆ ಯಶಸ್ವಿಯಾಗಿ ತಾವು ಅನುಭವಿಸುತ್ತಿದ್ದ ಖಾಲಿತನ ಈಗ ಇಲ್ಲ ಎಂದು ಹೇಳುತ್ತಿದ್ದ ಸೈನಿಕರು ಗೆಲುವಾಗಿರುತ್ತಿದ್ದರು.

ಕೈ ಮತ್ತು ದೇಹದ ಮೇಲೆ ಧರಿಸುವ ಸ್ಮಾರ್ಟ್ ಕಡಗಪದಕಗಳನ್ನೂ ಮೀರಿ ಯೋಚಿಸುತ್ತಿರುವ 'ಗೂಗಲ್' ಮನುಷ್ಯನ ಮೂಲವಾದ ಕ್ರೋಮೋಸೋಮ್‌ಗಳಿಗೇ ಕೈಹಾಕಿ ಹೊಸ ಕ್ರಾಂತಿಯ ಎಲ್ಲ ಸಾಧ್ಯತೆಗಳನ್ನು ತೆರೆದಿಡುತ್ತಿದೆ. ಗೂಗಲ್ ಕಂಪನಿಯ ಸಹ ಸಂಸ್ಥಾಪಕ ಸೆರ್ಗೀ ಬ್ರಿನ್‌ನ ಪತ್ನಿ ಅನ್ನೆ ವೊಸಿಕ್ಕಿ ಸ್ಥಾಪಿಸಿರುವ '23 ಅಂಡ್ ಮಿ' ಎಂಬ ಕಂಪನಿ ಮಾನವನ 23 ಜೊತೆ ವರ್ಣತಂತುಗಳನ್ನು ಬಿಡಿಬಿಡಿಯಾಗಿ ಅಭ್ಯಸಿಸಿ ಅವು ನಮ್ಮ ಬಗ್ಗೆ ಏನು ಹೇಳುತ್ತಿವೆ ಎಂಬುದನ್ನು ವಿಸ್ತೃತವಾಗಿ ತಿಳಿಸುತ್ತದೆ. ನೀವು 99 ಡಾಲರ್ ಪಾವತಿಸಿದರೆ ಕಂಪನಿಯಿಂದ ನಿಮಗೆ ಚಿಕ್ಕ ಬಾಟಲಿ ಇರುವ ಲಕೋಟೆ ಬರುತ್ತದೆ. ಬಾಟಲಿಯಲ್ಲಿ ನಿಮ್ಮ ಉಗುಳನ್ನು ಸಂಗ್ರಹಿಸಿ ಕ್ಯಾಲಿಫೋರ್ನಿಯದಲ್ಲಿರುವ ಕಂಪನಿಗೆ ಕಳಿಸಿದರಾಯಿತು. ನಿಮ್ಮ ಡಿಎನ್‌ಎಯನ್ನು ಕೂಲಂಕಶವಾಗಿ ಓದಿ, ಫಲಿತಾಂಶವನ್ನು ಆನ್‌ಲೈನ್‌ನಲ್ಲಿ ಕಳಿಸುತ್ತಾರೆ. ಅದರಲ್ಲಿ ನೀವೇನು, ನಿಮ್ಮ ತಲೆ ಕೂದಲು ಯಾವಾಗ ಸಂಪೂರ್ಣ ಉದುರುತ್ತದೆ, ನಿಮಗೆ ಈಗ ಇರುವ ಮತ್ತು ಮುಂದೆ ಬರಬಹುದಾದ ಕಾಯಿಲೆ, ನಿಮ್ಮ ಕಣ್ಣಿನ ದೃಷ್ಟಿ ಯಾವಾಗ ಇಲ್ಲವಾಗುತ್ತದೆ ಎನ್ನುವವರೆಗಿನ ಮಾಹಿತಿ ಅಲ್ಲಿರುತ್ತದೆ. ಇದನ್ನೆಲ್ಲ ನಿಖರವಾಗಿ ಹೇಳಲು ಕಂಪನಿ ಇತರೆ ಹಲವರ ಮಾಹಿತಿಯನ್ನಾಧರಿಸಿದ ಕಂಪ್ಯೂಟರ್ ಅಲ್ಗೊರಿದಂ ಬಳಸುತ್ತದೆ.

ಆರೋಗ್ಯ ಕ್ಷೇತ್ರಕ್ಕಷ್ಟೇ ಅಲ್ಗೊರಿದಂ ಸಹಾಯಮಾಡುತ್ತಿಲ್ಲ, ಕ್ರೀಡೆಗೂ ಕಾಲಿಟ್ಟಿದೆ. ಅಮೆರಿಕದ ಓಕ್‌ಲ್ಯಾಂಡ್ ಅಥ್ಲೆಟಿಕ್ಸ್ ಮತ್ತು ನ್ಯೂಯಾರ್ಕ್ ಯಾಂಕೀಸ್ ತಂಡಗಳ ನಡುವಿನ ಬೇಸ್‌ಬಾಲ್ ಪಂದ್ಯಗಳಲ್ಲಿ ಯಾವಾಗಲೂ ಗೆಲ್ಲುತ್ತಿದ್ದುದು ಯಾಂಕೀಸ್ ತಂಡವೇ ಆಗಿತ್ತು. ಹೆಚ್ಚು ಹಣ ವ್ಯಯಿಸಿ ಸಮರ್ಥ ಆಟಗಾರರನ್ನು ಖರೀದಿಸುತ್ತಿದ್ದ ಯಾಂಕೀಸ್ ವಿರುದ್ಧ ಗೆಲ್ಲುವುದು ಕನಸಿನ ಮಾತಾಗಿತ್ತು. ಉಳಿದವರನ್ನೇ ಆಯ್ಕೆಮಾಡಿಕೊಳ್ಳುತ್ತಿದ್ದ ಓಕ್‌ಲ್ಯಾಂಡ್ ತಂಡದ ಮ್ಯಾನೇಜರ್ ಬೀನ್, ಗೆಲ್ಲಲೇಬೇಕೆಂದು ಪಣತೊಟ್ಟು ಕಂಪ್ಯೂಟರ್ ಮತ್ತು ಆರ್ಥಿಕ ತಜ್ಞರು ಅಭಿವೃದ್ಧಿಪಡಿಸಿದ ಅರ್ಕೇನ್ ಅಲ್ಗೊರಿದಂನ ನೆರವಿನಿಂದ ಗೆಲ್ಲುವ ಶಕ್ತಿಯಿರುವ ಆಟಗಾರರನ್ನು ಆಯ್ಕೆ ಮಾಡಿಕೊಂಡ. ನಂತರ ನಡೆದದ್ದು ಇತಿಹಾಸ. ಸತತ ಇಪ್ಪತ್ತು ಪಂದ್ಯಗಳನ್ನು ನ್ಯೂಯಾರ್ಕ್ ಯಾಂಕೀಸ್ ವಿರುದ್ಧ ಗೆದ್ದ ಓಕ್‌ಲ್ಯಾಂಡ್, ಇದುವರೆಗೂ ಯಾರೂ ಮುರಿಯದ ದಾಖಲೆ ನಿರ್ಮಿಸಿದೆ. ಇದಷ್ಟೇ ಅಲ್ಲ, ಕ್ರಿಕೆಟ್ ಪಂದ್ಯದಲ್ಲಿ ಬಳಕೆಯಲ್ಲಿರುವ ಡಕ್‌ವರ್ತ್ ಲೂಯಿಸ್ ವಿಧಾನ, ಎಲ್‌ಬಿಡಬ್ಲ್ಯೂ ಫಲಿತಾಂಶವನ್ನೂ ಅಲ್ಗೊರಿದಂನಿಂದಲೇ ನಿರ್ಧರಿಸಲಾಗುತ್ತದೆ.

## ಇಲ್ಲಿ ಎಲ್ಲವೂ ಬಟಾಬಯಲು

ನಮ್ಮ ಬಗ್ಗೆಯೂ ಇತರರಿಗೆ ಸ್ಪಷ್ಟವಾಗಿ ತಿಳಿದಿರುತ್ತದೆ ಎಂಬುದು ನೆನಪಿನಲ್ಲಿರಲಿ. ನಮಗರಿವಿಲ್ಲದೆ ನಮ್ಮೊಳಗೆ ಮೇಳೈಸುವ ಅಲ್ಗೊರಿದಂ ನಮ್ಮನ್ನು ಕಾಪಾಡುತ್ತದೆ ಸಹ. ಯಾವುದೋ ಕಾರಣದಿಂದ ದೂರದೂರಿಗೆ ನೀವೊಬ್ಬರೇ ಪ್ರಯಾಣಿಸುತ್ತಿದ್ದೀರಿ ಎಂದುಕೊಳ್ಳಿ. ನೀವು ನಿಮ್ಮ ಶುಗರ್ ಮತ್ತು ಬಿಪಿಗೆ ತೆಗೆದುಕೊಳ್ಳುವ ಮಾತ್ರೆಗಳನ್ನು ಮರೆತು ಹೊರಟಿದ್ದರೆ ನೀವು ಕಸಿವಿಸಿಗೊಳ್ಳುತ್ತೀರಿ. ಮುಂದಿನ ಊರು ತಲುಪುವ ಮೊದಲೇ ನಿಮ್ಮ ಮೊಬೈಲಿಗೆ ಹತ್ತಿರವಿರುವ ಮೆಡಿಕಲ್ ಶಾಪ್‌ಗಳ ಪಟ್ಟಿ ಬಂದು ಅಲ್ಲಿ ನಿಮ್ಮ ಕಾಯಿಲೆಗೆ ಬೇಕಾದ ಮಾತ್ರೆ ಇದೆಯೋ ಇಲ್ಲವೋ ಎಂಬ ಖಚಿತ ಮಾಹಿತಿ ಇರುತ್ತದೆ. ಮೊಬೈಲ್ ಆ್ಯಪ್ ಮೂಲಕ ಹಣ ವರ್ಗಾಯಿಸಿದರೆ, ನೀವು ಬಸ್ ಇಳಿಯುತ್ತಲೇ ಮೆಡಿಕಲ್ ಶಾಪಿನ ಹುಡುಗ ನಿಮ್ಮನ್ನು ಗುರುತಿಸಿ ನಿಮ್ಮ ಔಷಧಿಯನ್ನು ನಿಮಗೇ ತಲುಪಿಸುತ್ತಾನೆ. ಅಷ್ಟು ಜನ ಪ್ರಯಾಣಿಕರ ನಡುವೆ ನಿಮ್ಮನ್ನು ಹೇಗೆ ಗುರುತಿಸುತ್ತಾನೆ ಎಂದು ಕೇಳುತ್ತೀರಾ? ನೀವು ಹಣ ಸಂದಾಯ ಮಾಡುತ್ತಲೇ ನಿಮ್ಮ ಫೋಟೋ ಸಹಿತ ಇತರ ವಿವರಗಳೆಲ್ಲವೂ ಅಂಗಡಿಯ ಕಂಪ್ಯೂಟರಿನಲ್ಲಿ ಮೂಡಿಬಿಡುತ್ತವೆ. ಅದೇ ಚಿತ್ರ ಡೆಲಿವರಿ ಏಜೆಂಟನ ಮೊಬೈಲಿಗೂ ಬಂದಿರುತ್ತದೆ.

ತಪ್ಪು ಗ್ರಹಿಕೆಯಿಂದಾಗಿ ನಿಮ್ಮನ್ನು ಪೊಲೀಸರು ದಸ್ತಗಿರಿ ಮಾಡುತ್ತಾರೆಂದುಕೊಳ್ಳಿ; ಅವರಲ್ಲಿರುವ ಸಾಧನದಿಂದ ನಿಮ್ಮ ಚಿತ್ರ ಕ್ಲಿಕ್ಕಿಸಿದ ತಕ್ಷಣ ನಿಮ್ಮ ವಿವರ, ಹಿನ್ನೆಲೆ, ಅಪರಾಧ ನಡೆದಾಗ ನೀವು ಎಲ್ಲಿದ್ದಿರಿ? ನಿಮಗೂ ಅದಕ್ಕೂ ಸಂಬಂಧವಿಲ್ಲ ಎನ್ನುವುದು ಕ್ಷಣಾರ್ಧದಲ್ಲಿ ತಿಳಿದುಬಿಡುತ್ತದೆ. ನೀವು ಅನಗತ್ಯ ಕಿರಿಕಿರಿಯಿಂದ ಪಾರಾಗಿಬಿಡುತ್ತೀರಿ. ಇದು ಡಾಟಾ ದೇವರು ನಮಗೆ ನೀಡಬಹುದಾದ ವರದಾನ. ಹಾಗೆಯೇ ಟ್ರಾಫಿಕ್ ಪೊಲೀಸಿನವರು ರಸ್ತೆಯ ಮಧ್ಯ ನಿಮ್ಮ ವಾಹನ ತಡೆದು, ಅದರ ನಂಬರನ್ನು ಅವರ ಮೆಶೀನ್‌ನಲ್ಲಿ ಎಂಟರ್ ಮಾಡಿದ ತಕ್ಷಣ, ನೀವು ಕಳೆದ ಆರು ತಿಂಗಳಿನಲ್ಲಿ ಎಲ್ಲೆಲ್ಲಿ ರಸ್ತೆ ನಿಯಮ ಉಲ್ಲಂಘಿಸಿದ್ದೀರಿ ಎಂಬುದು ಗೊತ್ತಾಗಿಬಿಡುತ್ತದೆ. ಅದಕ್ಕಾಗಿ ವಿಧಿಸುವ ದಂಡ ಕಟ್ಟಿದ ನಂತರವೇ ನೀವು ನಿಮ್ಮ ವಾಹನದೊಂದಿಗೆ ಮನೆ ಸೇರಬಹುದು. ಮಾಡಿದ ಹಳೆಯ ತಪ್ಪಿಗೆ ಡೇಟಾ ದೇವರು ನೀಡುವ ಶಿಕ್ಷೆ ಅನುಭವಿಸದೆ ಬೇರೆ ದಾರಿ ಇರುವುದಿಲ್ಲ. ವರವಾದ ಶಾಪ ಕೆಲವೊಮ್ಮೆ ಶಾಪವಾಗಿ ಬದಲಾಗುವುದು ಹೇಗೆ!



## ಹೊಸ ಚಿಂತನೆ ಹೊಸ ಕ್ರಮ

ಈ ಪ್ರಸಂಗವನ್ನು ಹೇಳಿದವನು ಯುವಲ್ ನೋಹ ಹರಾರಿ. ಕಳೆದೈದು ವರ್ಷಗಳಿಂದ ಜಗತ್ತಿನ ಚಿಂತಕರ ಚಾವಡಿಯಲ್ಲಿ ಬಹಳವಾಗಿ ಕೇಳಿ ಬರುತ್ತಿರುವ ಹೆಸರು ನೋಹ ಅವರದು. ಜೆರುಸಲೇಮಿನ ಹೀಬ್ರೂ ವಿಶ್ವವಿದ್ಯಾನಿಲಯದಲ್ಲಿ ಇತಿಹಾಸ ಚರಿತ್ರೆಯ ಪಾಠ ಮಾಡುವ ಹರಾರಿ ಇಂದಿನ ಮತ್ತು ನಾಳೆಯ ಮನುಷ್ಯನ ಸ್ಥಿತಿ ಭವಿಷ್ಯಗಳ ಕುರಿತು ಮೂರು ಜಗದ್ವಿಖ್ಯಾತ

